**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 20 ಆಕೋಜೇ 2019.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ
ಬೆಂಗಳೂರು, ದಿನಾಂಕ:25-07-2019.

**ಅಧಿಸೂಚನೆ**

ವಿಷಯ:- ಕರ್ನಾಟಕ ಸರ್ಕಾರ ಸಚಿವಾಲಯದ ಸಂಸದೀಯ ವ್ಯವಹಾರಗಳ ಇಲಾಖೆಯ ಪ್ರಾರೂಪಣಾ ಶಾಖಾಧಿಕಾರಿ ವೃಂದದ ದಿನಾಂಕ:18-8-1979 ರಿಂದ 31-12-2018ರ ಅವಧಿಗೆ, ದಿನಾಂಕ:01-01-2019 ರಲ್ಲಿದ್ದಂತೆ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಬಗ್ಗೆ.

ಉಲ್ಲೇಖ:- (1) ಅಧಿಸೂಚನೆ ಸಂಖ್ಯೆ: ಸಿಆಸುಇ 08 ಆಕೋಜೇ 2005, ದಿನಾಂಕ: 18-03-2005.
(2) ಅಧಿಸೂಚನೆ ಸಂಖ್ಯೆ: ಸಿಆಸುಇ 07 ಆಕೋಜೇ 2006, ದಿನಾಂಕ: 27-03-2006
(3) ಅಧಿಸೂಚನೆ ಸಂಖ್ಯೆ: ಸಿಆಸುಇ 07 ಆಕೋಜೇ 2007, ದಿನಾಂಕ: 29-03-2007
(4) ಅಧಿಸೂಚನೆ ಸಂಖ್ಯೆ: ಸಿಆಸುಇ 08 ಆಕೋಜೇ 2008, ದಿನಾಂಕ: 10-04-2008.
(5) ಅದಿಸೂಚನೆ ಸಂಖ್ಯೆ: ಸಿಆಸುಇ 08 ಆಕೋಜೇ 2009, ದಿನಾಂಕ: 31-03-2009
(6) ಅಧಿಸೂಚನೆ ಸಂಖ್ಯೆ: ಸಿಆಸುಇ 08 ಆಕೋಜೇ 2010, ದಿನಾಂಕ: 10-05-2010.
(7) ಅಧಿಸೂಚನೆ ಸಂಖ್ಯೆ: ಸಿಆಸುಇ 08 ಆಕೋಜೇ 2011, ದಿನಾಂಕ: 24-03-2011.
(8) ಅದಿಸೂಚನೆ ಸಂಖ್ಯೆ: ಸಿಆಸುಇ 08 ಆಕೋಜೇ 2012, ದಿನಾಂಕ: 31-03-2012.
(9) ಅಧಿಸೂಚನೆ ಸಂಖ್ಯೆ: ಸಿಆಸುಇ 12 ಆಕೋಜೇ 2013, ದಿನಾಂಕ: 01-06-2013.
(10) ಅಧಿಸೂಚನೆ ಸಂಖ್ಯೆ: ಸಿಆಸುಇ 19 ಆಕೋಜೇ 2014, ದಿನಾಂಕ: 11-09-2014.
(11) ಅಧಿಸೂಚನೆ ಸಂಖ್ಯೆ: ಸಿಆಸುಇ 19 ಆಕೋಜೇ 2015, ದಿನಾಂಕ: 23-07-2015.
(12) ಅಧಿಸೂಚನೆ ಸಂಖ್ಯೆ: ಸಿಆಸುಇ 28 ಆಕೋಜೇ 2016, ದಿನಾಂಕ: 16-01-2017.
(13) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 182 ಎಸ್ಆರ್ಆರ್ 2011, ದಿನಾಂಕ:06-5-2017.
(14) ಅಧಿಸೂಚನೆ ಸಂಖ್ಯೆ: ಸಿಆಸುಇ 69 ಆಕೋಜೇ 2017, ದಿನಾಂಕ:20-12-2017.
(15) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 186 ಎಸ್ಆರ್ಎಸ್ 2018, ದಿನಾಂಕ:27-02-2019.
(16) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 186 ಎಸ್ಆರ್ಎಸ್ 2018, ದಿನಾಂಕ:15-05-2019.
(17) ಅಧಿಸೂಚನೆ ಸಂಖ್ಯೆ: ಸಿಆಸುಇ 20 ಆಕೋಜೇ 2019, ದಿನಾಂಕ:17-06-2019.

ಶ್ರೀ ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 ಮತ್ತು ಇತರ ಸಿವಿಲ್ ಅಪೀಲುಗಳಲ್ಲಿ ದಿನಾಂಕ:09.02.2017ರಂದು ನೀಡಿರುವ ತೀರ್ಪಿನಲ್ಲಿ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧಾರಣಾ ಅಧಿನಿಯಮ, 2002ರ ಪ್ರಕರಣ 3 ಮತ್ತು 4 ನ್ನು ಸಂವಿಧಾನದ ಅನುಚ್ಛೇಧ– 14 ಮತ್ತು 16ಕ್ಕೆ ಅಧಿಕಾರಾತೀತ (Ultra vires Articles 14 and 16 of the Constitution)ಎಂದು ಆದೇಶಿಸಿರುತ್ತದೆ.

2. ಈ ಹಿನ್ನೆಲೆಯಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ವಿಭಾಗವು ಉಲ್ಲೇಖ(13)ರಲ್ಲಿನ ದಿನಾಂಕ:06.05.2017ರ ಸರ್ಕಾರದ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಗಳನುಸಾರ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮೀಸಲಾತಿ ಅನುಸರಿಸಿರುವ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ಪರಿಷ್ಕರಿಸಲು ಆದೇಶಿಸಿರುತ್ತದೆ. ಅಂತೆಯೇ, ಮಾರ್ಗಸೂಚಿಗಳನುಸಾರ ಈ ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ, ಅಂತಿಮ ಜೇಷ್ಠತಾ ಪಟ್ಟಿಯನ್ನು ಮೇಲೆ ಉಲ್ಲೇಖ(14)ರ ಅಧಿಸೂಚನೆಯಲ್ಲಿ ದಿನಾಂಕ:20.12.2017ರಂದು ಹೊರಡಿಸಲಾಗಿದೆ.

3. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011–ಶ್ರೀ ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಕೇಂದ್ರ ಸರ್ಕಾರ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ.ಸಂಖ್ಯೆ:1151/2018ರಲ್ಲಿ ದಿನಾಂಕ:10.05.2019ರಂದು ನೀಡಿದ ತೀರ್ಪಿನಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:23.06.2018ರಂದು ಪ್ರಕಟಿಸಲಾದ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಸಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿದಿರುವುದರಿಂದ, 2017ರ ಅಧಿನಿಯಮದನ್ವಯ ಕ್ರಮ ತೆಗೆದುಕೊಳ್ಳುವ ಬಗ್ಗೆ ಉಲ್ಲೇಖ(15) ಮತ್ತು (16)ರ ಸರ್ಕಾರದ ಆದೇಶಗಳಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.

4. 2017ರ ಅಧಿನಿಯಮದ ಸೆಕ್ಷನ್ 4ರಲ್ಲಿ "ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಮೀಸಲಾತಿ ಆದೇಶದಲ್ಲಿ ಉಪಬಂಧಿಸಲಾದಂತೆ ಬಡ್ತಿಯಲ್ಲಿ ಮೀಸಲಾತಿ ಆದೇಶದ ನೀತಿಗೆ ಅನುಸಾರವಾಗಿ ಸಾವಿರದ ಒಂಬೈನೂರ ಎಪತ್ತೆಂಟರ ಏಪ್ರಿಲ್ ಇಪ್ಪತ್ತೇಳನೇ ದಿನಾಂಕದಿಂದ ಜಾರಿಗೆ ಬರುವಂತೆ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಈಗಾಗಲೇ ನೀಡಲಾಗಿರುವ ತತ್ಪರಿಣಾಮ ಜೇಷ್ಠತೆಯು ಸಿಂಧುವಾಗಿರತಕ್ಕದ್ದು ಮತ್ತು ಅದನ್ನು ಸಂರಕ್ಷಿಸತಕ್ಕದ್ದು ಹಾಗೂ ಅದನ್ನು ಭಂಗಗೊಳಿಸತಕ್ಕದ್ದಲ್ಲ" ಎಂದು ತಿಳಿಸಿದೆ.

5. ಈ ಹಿನ್ನೆಲೆಯಲ್ಲಿ, ಉಲ್ಲೇಖ (16)ರ ಆದೇಶದಲ್ಲಿ ಉಲ್ಲೇಖ (15)ರ ಆದೇಶದ ಕಂಡಿಕೆ–8ರ ಉಪಖಂಡಿಕೆ (2)ರಲ್ಲಿ ಉಲ್ಲೇಖಿಸಲಾದ, ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ, ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 4, 5 ಮತ್ತು 6ನ್ನು ಸೆಕ್ಷನ್ 9ರೊಡನೆ ಸಹವಾಚನ ಮಾಡಿಕೊಂಡು, ಇವುಗಳನ್ವಯ ತಾತ್ಕಾಲಿಕ/ಅಂತಿಮ ಜೇಷ್ಠತಾ ಪಟ್ಟಿಗಳನ್ನು ತಯಾರಿಸಿ ಪ್ರಕಟಿಸುವ, ಅರ್ಹತಾ ದಿನಾಂಕಗಳನ್ನು ನಿಗದಿಪಡಿಸುವ, ಮುಂಬಡ್ತಿಗಳನ್ನು ಪುನರಾವಲೋಕನೆ ಮಾಡುವ, ವೇತನ ಮತ್ತು ಪಿಂಚಣಿಗಳನ್ನು ನಿಗದಿಪಡಿಸುವುದನ್ನು ಒಳಗೊಂಡ ಪ್ರಕ್ರಿಯೆಯನ್ನು ಗರಿಷ್ಠ 30 ದಿನಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು ಎಂದು ತಿಳಿಸಿದೆ.

6. ಅದರಂತೆ, ಉಲ್ಲೇಖ(14)ರ ಅಧಿಸೂಚನೆಯಲ್ಲಿ ದಿನಾಂಕ:20.12.2017ರಂದು ಹೊರಡಿಸಿರುವ ಪ್ರಾರೂಪಣಾ ಶಾಖಾಧಿಕಾರಿ ವೃಂದದ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ(15) ಮತ್ತು (16)ರ ಸರ್ಕಾರದ ಆದೇಶಗಳ ಹಿನ್ನೆಲೆಯಲ್ಲಿ ಪುನರಾವಲೋಕಿಸಿ ಪರಿಷ್ಕರಿಸಿ, ಉಲ್ಲೇಖ(17)ರ ಅಧಿಸೂಚನೆಯಲ್ಲಿ ದಿನಾಂಕ:17.06.2019ರಂದು ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಈ ಬಗ್ಗೆ ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿತ್ತು. ಈ ವೃಂದಕ್ಕೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ.

7. ಉಲ್ಲೇಖ(1)ರ ಅಧಿಕೃತ ಜ್ಞಾಪನ ಸಂಖ್ಯೆ: ಅಧಿಸೂಚನೆ ಸಂಖ್ಯೆ: ಸಿಆಸುಇ 08 ಆಕೋಜೇ 2005, ದಿನಾಂಕ: 18-03-2005ರಲ್ಲಿ ಪ್ರಕಟಗೊಂಡ ಕರ್ನಾಟಕ ಸರ್ಕಾರ ಸಚಿವಾಲಯದ ಪ್ರಾರೂಪಣಾ ಶಾಖಾಧಿಕಾರಿ ವೃಂದದ ಜೇಷ್ಠತಾ ಪಟ್ಟಿಯನ್ನು ಮುಂದುವರೆಸಿ, ಉಲ್ಲೇಖ(2) ರಿಂದ ಉಲ್ಲೇಖ(12)ರವರೆಗೆ ಪ್ರತಿ ವರ್ಷ ಪ್ರಕಟಿಸಲಾದ ಜೇಷ್ಠತಾ ಪಟ್ಟಿಗಳಲ್ಲಿ **ಕರ್ನಾಟಕ ರಾಜ್ಯದ (ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಪ್ರಕರಣ 3 ಮತ್ತು 4ನ್ನು ಅದರ ಪ್ರಕರಣ 5ರೊಂದಿಗೆ ಸಹವಾಚನ** ಮಾಡಿಕೊಂಡಂತೆ ದಿನಾಂಕ:27.04.1978 ರಿಂದ ಮೀಸಲಾತಿಯನ್ವಯ ನೀಡಲಾದ ಪದೋನ್ನತಿಗಳನ್ನು ಪುನರಾವಲೋಕಿಸಲಾಗಿದೆ. ಹಾಗಾಗಿ, ಸದರಿ ಜೇಷ್ಠತಾ ಪಟ್ಟಿಗಳಲ್ಲಿ ನೀಡಲಾಗಿದ್ದ ಅರ್ಹತಾ ದಿನಾಂಕಗಳು ಸಿಂಧುವಾಗಿವೆ.

8. ಪುನರಾವಲೋಕನೆಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಪ್ರಾರೂಪಣಾ ಸಹಾಯಕರನ್ನು ಮೀಸಲಾತಿ ಮತ್ತು ಬ್ಯಾಕ್‌ಲಾಗ್ ಸ್ಥಾನಗಳಿಗಿಂತ ಹೆಚ್ಚಾಗಿ ಅಥವಾ ಮೀಸಲಾತಿ ಆದೇಶಗಳಲ್ಲಿ ಕಲ್ಪಿಸಿರುವ ಮೀಸಲಾತಿಗೆ ಪ್ರತಿಯಾಗಿ ಮುಂಬಡ್ತಿ ನೀಡಿರುವುದು ಕಂಡುಬರುವುದಿಲ್ಲ. ಆದ್ದರಿಂದ, ಈ ವೃಂದದ ದಿನಾಂಕ:18-8-1979ರಿಂದ 31-12-2018ರವರೆಗಿನ ಅವಧಿಗೆ ದಿನಾಂಕ:01-01-2019ರಲ್ಲಿದ್ದಂತೆ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು **ಅನುಬಂಧ-1**ರಲ್ಲಿರುವಂತೆ ಇದರೊಂದಿಗೆ ಲಗತ್ತಿಸಿ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
B. R. Nagarathna
(ಬಿ.ಆರ್. ನಾಗರತ್ನ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.&ಆ.ಸು.ಇಲಾಖೆ (ಆಡಳಿತ ಕೋಶ)

ಇವರಿಗೆ:

1) ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ.
2) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ(ಸಿಬ್ಬಂದಿ-1) / ಸಂಸದೀಯ ವ್ಯವಹಾರಗಳ ಇಲಾಖೆ(ಪ್ರಾರೂಪಣಾ)
3) ಮುಖ್ಯ ಗ್ರಂಥಾಧಿಕಾರಿ, ಸಚಿವಾಲಯ ಗ್ರಂಥಾಲಯ, ವಿಧಾನಸೌಧ/ವಿಕಾಸಸೌಧ.
4) ಸಂಬಂಧಪಟ್ಟ ಅಧಿಕಾರಿಗಳಿಗೆ.
5) ಶಾಖಾ ರಕ್ಷಾ ಕಡತ / ಹೆಚ್ಚುವರಿ ಕಡತ.

ವೆಬ್‌ಸೈಟ್:- www.karnataka.gov.in -> Status of Files/Letters.

ಅನುಬಂಧ-1

ದಿನಾಂಕ:18.08.1979 ರಿಂದ 31.12.2018 ರವರೆಗೆ ದಿನಾಂಕ:01.1.2019ರಲ್ಲಿದ್ದಂತೆ ಪ್ರಾರೂಪಣಾ ಶಾಖಾಧಿಕಾರಿ ವೃಂದದ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿ

| ಕ್ರ.ಸಂ | ಹೆಸರು | ಮೀಸಲಾತಿ ವರ್ಗ | ಪೋಷಕ ವೃಂದದ ಅಂತರ ಜೇಷ್ಠತಾ ಕ್ರ.ಸಂ. ದಿ:01.01.2017 ರಲ್ಲಿದ್ದಂತೆ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಪ್ರಾರೂಪಣಾ ಶಾಖಾಧಿಕಾರಿ ಹುದ್ದೆಗೆ ನೇಮಕಾತಿ/ ಮುಂಬಡ್ತಿ ಪಡೆದ ದಿನಾಂಕ | ಜೇಷ್ಠತೆಗೆ ನೈಜವಾಗಿ ಅರ್ಹವಾದ ದಿನಾಂಕ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ರಾಜಪ್ಪ | – | 1 | 07.02.1935 | 11.04.1966 | – | – | ಮುಂಬಡ್ತಿ |
| 2 | ಡಿ.ವಿ. ಹತ್ತಿ | – | 2 | 08.04.1946 | 13.10.1970 | 18.08.1979 | 18.08.1979 | –,,– |
| 3 | ಭಾ.ಭೀ.ಪತ್ತಾರ | – | 3 | 06.06.1955 | 12.07.1977 | 27.05.1989 | 27.05.1989 | –,,– |
| 4 | ಎಲ್. ಸಿದ್ದಯ್ಯ | – | 4 | 06.03.1948 | 21.07.1977 | 31.07.1991 | 31.07.1991 | –,,– |
| 5 | ಟಿ.ಎ.ನಾಣಯ್ಯ | – | 5 | 30.03.1943 | 27.02.1970 | 06.09.1992 | 06.09.1992 | –,,– |
| 7 | ಕೆ. ದ್ವಾರಕನಾಥ ಬಾಬು | – | 7 | 20.05.1958 | 09.11.1983 | 03.06.1994 | 03.06.1994 | –,,– |
| 8 | ರಿಚಾರ್ಡ್ ಲೋಬೋ | – | 8 | 18.11.1952 | 23.07.1973 | 03.06.1994 | 03.06.1994 | –,,– |
| 9 | ನೀಲಕಂಠಾಚಾರ್ .ಕೆ | – | 9 | 01.06.1955 | 04.11.1977 | 08.09.1997 | 08.09.1997 | –,,– |
| 10 | ಶ್ರೀಧರ್ .ಜಿ | – | 10 | 16.12.1963 | 30.01.1986 | 08.09.1997 | 08.09.1997 | –,,– |
| 11 | ಶ್ಯಾಮಲ ಬಿ.ಜಿ | – | 11 | 16.05.1960 | 05.07.1985 | 11.04.2000 | 11.04.2000 | –,,– |
| 12 | ಆಂಜನಿ ಆರ್ | – | 12 | 11.07.1956 | 09.08.1982 | 11.04.2000 | 11.04.2000 | –,,– |
| 13 | ಜಿ.ಡಿ.ಗೋಪಾಲ್ | – | 13 | 16.06.1952 | 23.01.1979 | – | – | ಪ್ರಾರೂಪಣಾ ಸಹಾಯಕ ಹುದ್ದೆಯಲ್ಲಿ ಕಾರ್ಯವರದಿ ಮಾಡಿಕೊಂಡಿರುವುದಿಲ್ಲ. |

| | | | | | | | | |
|---|---|---|---|---|---|---|---|---|
| 14 | ಕೆ.ಎಸ್. ಶ್ರೀಧರ್ | – | 14 | 14.07.1958 | 09.08.1982 | 11.05.2006 | 11.05.2006 | –,,– |
| 15 | ಹೆಚ್.ರಾಜಕುಮಾರ್ | – | 15 | 22.10.1960 | 13.08.1982 | 11.05.2006 | 11.05.2006 | –,,– |
| 16 | ಟಿ.ಎಸ್.ಸತೀಶ್ ಬಾಬು | – | 16 | 03.07.1960 | 02.11.1978 | – | – | ಪ್ರಾರೂಪಣಾ ಸಹಾಯಕ ಹುದ್ದೆಯಲ್ಲಿ ನಿಧನ |
| 17 | ಬಿ.ಎಸ್.ಶ್ರೀಧರ್ ಬಾಬು | – | 17 | 19.12.1954 | 12.03.1976 | – | – | ಪ್ರಾರೂಪಣಾ ಸಹಾಯಕ ಹುದ್ದೆಯಲ್ಲಿ ಸ.ಸೇವೆಯಿಂದ ಬಿಡುಗಡೆ |
| 18 | ಎಂ.ಎಸ್.ಶಮಂತ | – | 18 | 04.12.1951 | 16.07.1981 | 11.05.2006 | 11.05.2006 | |
| 19 | ಎನ್.ಎ. ಕೇಶವಮೂರ್ತಿ | – | 19 | 14.03.1954 | 24.07.1985 | 07.09.2009 | 07.09.2009 | |
| 20 | ಶ್ರೀನಿವಾಸ ಆರ್. ಜೋಶಿ | – | 20 | 22.01.1972 | 04.01.2000 | 08.11.2012 | 08.11.2012 | ಮುಂಬಡ್ತಿ |
| 21 | ಆರ್. ಶ್ರೀನಿವಾಸ | ಪಜಾ | 21 | 18.06.1975 | 01.02.2006 | 18.05.2013 | 18.05.2013 | –,,– |
| 22 | ಡಿ.ಬಿ. ಜನಾರ್ಧನ | ಪಪಂ | 23 | 01.06.1976 | 28.09.2006 | 18.05.2013 | 18.05.2013 | |
| 23 | ಅಫೀಫಾ ಉಸ್ಮೋನಿ | – | 22 | 19.05.1981 | 27.09.2006 | 29.10.2014 | 29.10.2014 | |
| 24 | ಬಿ.ವಿ. ಗೀತಾಬಾಯಿ | – | 24 | 17.01.1971 | 01.09.1998 | 13.04.2016 | 13.04.2016 | |
| 25 | ಆರ್.ವಿ.ಕುಸುಮ | – | 25 | 20.07.1971 | 08.10.2001 | 16.08.2016 | 16.08.2016 | |

B. R. Nagarathna

(ಬಿ.ಆರ್.ನಾಗರತ್ನ)

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿ.ಆ.ಸು.ಇ (ಆಡಳಿತ ಕೋಶ).